**ಸಾಕ್ಷಿಯನ್ನು ದಿನಾಂಕಃ 08.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಹೆಚ್ ಎಸ್ ಪಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| **ಕ್ರಮ ಸಂಖ್ಯೆ** | : | **ದಾಖಲೆಗಳು** |
|---|---|---|
| 1 | : | Case sheet |
| 2 | : | Total 6– X ray films |
| 3 | : | Follow up consultation |

**ಮೇಲ್ಕಂಡ ದಾಖಲೆಗಳನ್ನು ನಿಶಾನೆ ಪಿಃ 16 ರಿಂದ 18 ಎಂದು ಗುರುತಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ HM ವಕೀಲರ ಪರ ಶ್ರೀ LV ವಕೀಲರಿಂದಃ**

1. ಅರ್ಜಿದಾರರು ಮೊದಲು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅರ್ಜಿದಾರರನ್ನು ಪರೀಕ್ಷಿಸಿದಾಗ ಎಡಗಾಲಿನ ಪಾದದ ಮೂಳೆ ಮುರಿದಿತ್ತು. ಅರ್ಜಿದಾರರಿಗೆ ಆಗಿದ್ದ ಗಾಯ ವಾಸಿಯಾಗುವಂತಹ ಗಾಯ ಎಂದರೆ ಸರಿ. ಅವರಿಗೆ ಈಗ ಗಾಯ ಪೂರ್ಣವಾಗಿ ವಾಸಿಯಾಗಿದೆ ಎಂದರೆ ಸರಿ. ನಾನು ಅರ್ಜಿದಾರರನ್ನು ಕೊನೆಯದಾಗಿ ದಿಃ 02.06.2026 ರಂದು ಪರೀಕ್ಷಿಸಿರುತ್ತೇನೆ. ಅರ್ಜಿದಾರರನ್ನು ಮೊದಲು ನಾನು 2024 ರಲ್ಲಿ ಪರೀಕ್ಷಿಸಿ ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ. ಶಸ್ತ್ರ

ಚಿಕಿತ್ಸೆಯನ್ನು 2024 ರಲ್ಲಿ ಮಾಡಿರುತ್ತೇನೆ. ನಾನು ಶಸ್ತ್ರ ಚಿಕಿತ್ಸೆ ಮಾಡಿದ್ದ ಗಾಯಗಳು ಗುಣವಾಗಿವೆ ಎಂದರೆ ಸರಿ. ಈಗ ಅರ್ಜಿದಾರರು ಸಹಜ ಸ್ಥಿತಿಯಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸ್ವಲ್ಪ ಹೂನತೆ ಇದೆ ಎಂದು ನುಡಿದಿರುತ್ತಾರೆ. ನಾನು ಕೊನೆಯದಾಗಿ ಅರ್ಜಿದಾರರನ್ನು ಪರೀಕ್ಷಿಸಿದಾಗ ಅವರಿಗೆಯಾವುದೇ ತೊಂದರೆ ಇರಲಿಲ್ಲ ಎಂದರೆ ಅರ್ಜಿದಾರರು ತನ್ನ ಎಡಗಾಲಿನಲ್ಲಿನೋವು ಇದೆ ನಡೆಯಲುಸ್ವಲ್ಪ ಕಷ್ಟ ಎಂದು ಹೇಳಿದ್ದರು. ನೋವು ಬಿಟ್ಟರೆ ಬೇರೆ ಏನೂ ತೊಂದರೆ ಇಲ್ಲ ಎಂದರೆ ಅಂಗದ Movement restrict ಆಗಿದೆ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳು ವಾಸಿಯಾಗುವಂತಹ ಗಾಯಗಳು ಎಂದರೆ Movement restriction ಇದೆ. ಸಾಮಾನ್ಯವಾಗಿ ಅಪಘಾತವಾದವರಿಗೆ ಗಾಯಗಳು 3–4 ವರ್ಷಗಳಲ್ಲಿ ಗುಣವಾಗುತ್ತವೆ ಎಂದರೆ ಸರಿ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಷ್ಟು ಅಂಗನ್ಯೂನ್ಯತೆ ಅರ್ಜಿದಾರರಿಗೆ ಇದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನಾನು ಅರ್ಜಿದಾರರ ಜೊತೆ ಷರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದು, 2018 ರ ಗೆಜೆಟ್ ಅಧಿಸೂಚನೆ ಪ್ರಕಾರ ಅಂಗನ್ಯೂನ್ಯತೆ ಪ್ರಮಾಣ ನಿರ್ಧರಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯವಾಗಲೀ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಅರ್ಜಿದಾರರ ಚಿತಾವಣೆ ಮೇರೆಗೆ ಹೇಳಿದ್ದು, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಮೋಹನಕುಮಾರಿ ಎನ್. ಬಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.